ನಂ. 256. ತಾರೀಖು 19ನೇ ಶಪ್ಟಂಬರ್ 1876.

ಬೇಲೂರು ತಾಲ್ಲೂಕು ಅಮಲ್ದಾರ್ ಅಬ್ದುಲ್‌ಖಾದರ್ ಯವರಿಗೆ 1876ನೇ ಇಸವಿ ಅಕ್ಟೋಬರು. 6ನೇ ತಾರೀಖು ಲಗಾಯತು 10 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 257. ತಾರೀಖು 19ನೇ ಅಕ್ಟೋಬರ್ 1876.

ಇದರಡಿ ಬರುವ ಬಡತೀಗಳು ಸ್ಕ 1876ನೇ ಇಸವಿ ಅಕ್ಟೋಬರು ಗುರ್ತೇ ತಾರೀಕ ಲಗಾಯತು ಮಂಜೂರ್ಮಾಡಲ್ಪಟ್ಟಿರುತ್ತವೆ.

2ನೇ ಕ್ಲಾಸ್ ಮುನಸೀಪ್ ಮುದ್ದುಕೃಷ್ಣ ನಾಯಕರು 1ನೇ ಕ್ಲಾಸಿಗೆ ಬಡತೀ ಮಾಡಲ್ಪಟ್ಟಿರುತಾರೆ.

3ನೇ ಕ್ಲಾಸ್ ಮುನಸೀಪ್ ವ ಪವಮೊಗ್ಗ ಡಿಸ್ಟ್ರಿಕ್ಟ್ ಆಫೀಷಿಯೇಟಿಂಗ್ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮಹಮದಲ್ಲಿ ಯವರು 2ನೇ ಕ್ಲಾಸಿಗೆ ಬಡತೀ ಮಾಡಲ್ಪಟ್ಟಿರುತ್ತಾರೆ.

ನಂ. 258. ತಾರೀಖು 20ನೇ ಅಕ್ಟೋಬರ್ 1876.

ಪೊಲಿಟಿಕಲ್ ಯೀಜಂಟ್ ವ ಘನವನ್ನು ಹೊಂದಿದ ಮೈಸೂರು ಮಹಾರಾಜ ರಾಜಾ ಸಾಹೆಬರವರ ಟ್ಯೂಟರಾದ ಕೆಪ್ಟ್ ವಿಲ್ಸ್ ಯವರಿಗೆ ಸಿವಿಲ್ ಲೀವ್ ಕೋಡ್ 21ನೇ ಸೆಕ್ಷನ್ ಅನುಸರಿಸಿ 1876ನೇ ಇಸವಿ ಅಕ್ಟೋಬರು 20ನೇ ಮುಕ್ತಂ ಲಗಾಯಿತು ಆಥವಾ ಅವರು ಯಾವ ಲಗಾಯಿತು ಉಪಯೋಗಿಸಿಕೊಳ್ಳುತ್ತಾರೋ ಆ ಲಗಾಯಿತು 2 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್.

ತಾರೀಖು 17ನೇ ಅಕ್ಟೋಬರ್ 1876.

ತುಮಕೂರು ಡಿವಿಜ್ಞ ಸಬ್ ಓವರ್‌ಸಿಯರ್ ಮಿ! ಜಿಬ್ಸ್‌ನವರಿಗೆ ಕಳೆದ ಜೂ 14ನೇ ಮುಕ್ತಮಿನ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ಮೂರು ತಿಂಗಳ್ಗಸೀಕ್ ರಜಾ ಸಿವಿಲ್ ಲೀವ್‌ಕೋಡಿನ F ಸಪ್ಲಿಮಂಟ್ 9ನೇ ಸೆಕ್ಷನ್ ಅನುಸರಿಸಿ 1877ನೇ ಪಿಬವರೀ 7ನೇ ಮುಕ್ತಂ ವಿನುಹೂ ಹೆಚ್ಚಿಸಲ್ಪಟ್ಟಿದೆ.

"ಬಮೋಜೀಬ್ ಹುಕ್ಕುಂ,"

C. BOWEN, *Captain*, R. E.,
Offg. Under-Secy., R. & B. Branch.